## ದಿನಾಂಕ :20–02–2021ರಂದು ಶನಿವಾರ ಬೆಳಗ್ಗೆ 11:00 ಅನ್ನಸಂದ್ರ ಪಾಳ್ಯದ, ಬಿ.ಬಿ.ಎಂ.ಪಿ ಯೋಗ ಸೆಂಟರ್‌ನಲ್ಲಿ ವಾರ್ಡ್ ಸಂಖ್ಯೆ:87ರ, ಶ್ರೀ.ವಿಜಯ ಕುಮಾರ್ ಸಹಾಯಕ ಕಾರ್ಯಪಾಲಕ ಅಭಿಯಂತರರು (Nodel Officer) ರವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.

**ಹಾಜರಿದ್ದ ಅಧಿಕಾರಿಗಳು :**

| | |
|---|---|
| 1. | ಶ್ರೀ.ಹೆಚ್.ಚಂದ್ರಪ್ಪ (ಸಹಾಯಕ ಅಭಿಯಂತರರು) |
| 2. | ಶ್ರೀ. ರಂಗನಾಥ, ಕಿರಿಯ ಆರೋಗ್ಯ ಪರಿವೀಕ್ಷಕರು |
| 3. | ಶ್ರೀ. ಮುರುಗ |
| 4. | ಶ್ರೀ. ಸುಂಕಪ್ಪ |
| 5. | ಶ್ರೀ. ಸಂದೀಪ್ |

ಮಾನ್ಯ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳು, ವಾರ್ಡ್ ಸಮಿತಿ ಸದಸ್ಯರು ಹಾಗೂ ರೆಸಿಡೆಂಟ್ಸ್ ವೆಲ್ಫೇರ್ ಅಸೋಸಿಯೇಷನ್‌ನ ಅಧ್ಯಕ್ಷರುಗಳು, ಪ್ರತಿನಿದಿಗಳು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸುತ್ತಾ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಲಾಯಿತು.

ಈ ಹಿಂದೆ ನಡೆದ ಸಭೆಯ ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

ಪ್ರಪಂಚದಾದ್ಯಂತ ಕೋವಿಡ್–19 ಮಹಾಮಾರಿ ರೋಗವು ಹರುಡುತ್ತಿರುವುದು ಗಮನಾರ್ಹವಾಗಿ ಕಡಿಮೆಯಾಗಿರುವದನ್ನು ಸಭೆಯ ಗಮನಕ್ಕೆ ತರುತ್ತಾ ಯಾವುದೇ ಕಾರಣಕ್ಕೂ ಸಾರ್ವಜನಿಕ ಪ್ರದೇಶಗಳಲ್ಲಿ ಮುಖ ಗವಸು ಇಲ್ಲದೇ ಅಂತರ ಕಾಯ್ದುಕೊಳ್ಳದೇ ಇರಬಾರದೆಂದು ಕಾಲಕಾಲಕ್ಕೆ ಸ್ಯಾನಿಟೈಸರ್ಸ್‌ಗಳನ್ನು ಉಪಯೋಗಿಸಿಕೊಂಡು ಮಹಾಮಾರಿ ರೋಗದಿಂದ ದೂರವಿರಲು ಕೋರಲಾಯಿತು ಹಾಗೂ ಸ್ಥಳೀಯ ನಿವಾಸಿ ಕ್ಷೇಮಾಬಿವೃದ್ಧಿ ಸಂಘಗಳು ಈ ದಿಸೆಯಲ್ಲಿ ಸಾರ್ವಜನಿಕರಿಗೆ ತಿಳುವಳಿಕೆ ಉಂಟು ಮಾಡುವಂತೆ ಕೋರಲಾಯಿತು.

ಕ್ರಮ:ಕಿರಿಯ ಆರೋಗ್ಯ ನಿರೀಕ್ಷಕರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ.ನಾಗರಾಜ ರವರು ಮಾತನಾಡಿ ಶ್ರೀರಾಮ ದೇವಸ್ಥಾನದ ರಸ್ತೆಗಳಲ್ಲಿ ಪಾದಚಾರಿ ಮಾರ್ಗದಲ್ಲಿ ತಳ್ಳು ಗಾಡಿಯವರು ರಸ್ತೆ ಮತ್ತು ಫುಟ್‌ಪಾತ್‌ನಲ್ಲಿ ಗಾಡಿಗಳನ್ನು ನಿಲ್ಲಿಸಿ ವ್ಯಾಪಾರ ಮಾಡುತ್ತಿರುವ ಕಾರಣ ಟ್ರಾಫಿಕ್ ಸಮಸ್ಯೆಯಾಗುತ್ತಿರುವುದನ್ನು ಸಭೆಯ ಗಮನಕ್ಕೆ ತಂದು, ತಳ್ಳುವ ಗಾಡಿಯವರಿಗೆ ಲೈಸೆನ್ಸ್ ನೀಡಬಾರದೆಂದು ಕೋರಿದರು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ವ್ಯಾಪ್ತಿಯಲ್ಲಿ ಕಸವನ್ನು ತೆರವುಗೊಳಿಸಿದ ನಂತರ ಬ್ಲೀಚಿಂಗ್ ಪೌಡರ್ ಹಾಕಲು ತಿಳಿಸಿದರು.

ಕ್ರಮ:ವಾರ್ಡ್ ಅಭಿಯಂತರರು
ಹಾಗೂ ಆರೋಗ್ಯ ನಿರೀಕ್ಷಕರು

ಶ್ರೀ.ಸುಂಕಪ್ಪ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆಗಳಬದಿಯಲ್ಲಿರುವ ತ್ಯಾಜವನ್ನು ತೆಗೆಯುವುದರ ಬಗ್ಗೆ ಚರಂಡಿಯ ಹುಳೆತುವ ಬಗ್ಗೆ ಹಾಗೂ ವಿವಿದ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿದ್ದು ಸಾರ್ವಜನಿಕರ ಅನುಕೂಲತೆಗಾಗಿ ತುರ್ತಾಗಿ ಪೂರ್ಣಗೊಳಿಸಿಕೊಡುವಂತೆ ಕೋರಿದರು. ಈಗಾಗಲೇ ಕೆಲವು ಕಡೆ ಸಿ.ಸಿ ಕ್ಯಾಮರಗಳನ್ನು ಅಳವಡಿಸಿದ್ದು ಇನ್ನು ಕೆಲವು ಭಾಗಗಳಲ್ಲಿ ಸಿ.ಸಿ.ಕ್ಯಾಮರಗಳನ್ನು ಅಳವಡಿಸುವಂತೆ ಕೋರಿದರು.

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ತಿವ್ರವಾಗಿದ್ದು ಬೋರ್‌ವೇಲ್‌ಗಳನ್ನು ಕೋರಿಸಲು ಕೋರಿದರು.

ಕ್ರಮ:ವಾರ್ಡ್ ಅಭಿಯಂತರರು

ಶ್ರೀ.ಇಪ್ತಿಯರ್ ರವರು ಮಾತನಾಡಿ ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯಲ್ಲಿ ಫುಟ್‌ಪಾತ್ ತೆರವುಗೊಲಿಸುವ ಬಗ್ಗೆ ಮತ್ತು ವಿಭೂತಿಪುರ ಮುಖ್ಯರಸ್ತೆಯಲ್ಲಿ ಚರಂಡಿ ಹುಳೆತುವ ಬಗ್ಗೆ ಮತ್ತು ರಸ್ತೆಯಲ್ಲಿ ಸಂಚರಿಸುವಾಗ ಧನಗಳು ಅಡ್ಡಲಾಗಿ ಬರುತ್ತಿದ್ದು ಇದ್ದಕ್ಕೆ ಸೂಕ್ತವಾದ ಕ್ರಮಗಳನ್ನು ಕೈಗೊಳುದರ ಬಗ್ಗೆ ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ವಾರ್ಡ್ ವ್ಯಾಪ್ತಿಯಲ್ಲಿ ಯು.ಜಿ.ಡಿ ಸಮಸ್ಯೆಯವಿದ್ದು ಅದನ್ನು ಈ ಕೂಡಲೇ ಬಗೆ ಅರಿಸಲು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ಕ್ರಮ:ವಾರ್ಡ್ ಅಭಿಯಂತರರು

ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್ ವ್ಯಾಪ್ತಿಯ ಶ್ರೀ. ಮುರುಗ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯ ರಮೇಶ್‌ನಗರದಲ್ಲಿ 1ನೇ ಕ್ರಾಸ್, 8ನೇ ಕ್ರಾಸ್ ಮತ್ತು 9ನೇ ಹಾಗೂ ವಿನಾಯಕನಗರದಲ್ಲಿ 3ನೇ ಕ್ರಾಸ್, 4ನೇ ಕ್ರಾಸ್ ಮತ್ತು 5ನೇ ಕ್ರಾಸ್‌ನಲ್ಲಿ ಚರಂಡಿ ಹುಳೆತುವ ಬಗ್ಗೆ ಈ ಕೂಡಲೇ ಕ್ರಮಕೈಗೊಳಬೇಕೆಂದು ವಾರ್ಡ್ ಅಭಿಯಂತರರಿಗೆ ಸೂಚಿಸಿದರು.

ಕ್ರಮ:ವಾರ್ಡ್ ಅಭಿಯಂತರರು

ಶೀ ವಿಜಯಕುಮಾರ್ ಸ.ಕಾ.ಅಂ ರವರು ಮಾತನಾಡಿ ಈ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಅದಿಕಾರಿಗಳು ಬಂದಿರುವುದಿಲ್ಲ ವಾದರಿಂದ ಮುಂದಿನ ಸಭೆಗೆ ತಪ್ಪದೆ ಹಾಜರಾಗಲು ಸೂಚನೆ ನೀಡಿದರು. ಹಾಗೂ ಸಾರ್ವಜನಿಕರು ಹೆಚ್ಚಾಗಿಕುಂದುಕೊರತೆಗಳಿರುವ್ವವರು ಸಭೆಗೆ ಬರುವಂತೆ ಪ್ರಚಾರಪಡಿಸಲು ಸೂಚಿಸಿದರು

ಕ್ರಮ:ವಾರ್ಡ್ ಕಾರ್ಯದಶಿ

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು
ವಾರ್ಡ್ ನಂ.87 ಹೆಚ್.ಎ.ಎಲ್ ಏರ್‌ಪೋರ್ಟ್

ವಾರ್ಡ್ ಸಮಿತಿ ಅಧ್ಯಕ್ಷರು ಹಾಗೂ
ನೋಡೆಲ್ ಅಧಿಕಾರಿಗಳು

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು, ಬಿಬಿಎಂಪಿ, ಮಹದೇವಪುರ ವಲಯ ರವರ ಮಾಹಿತಿಗಾಗಿ ಗೌರವ ಪೂರ್ವಕವಾಗಿ ಸಲ್ಲಿಸಿದೆ.
2. ತೋಟಗಾರಿಕೆ ಅಧೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗ.
4. ಕಂದಾಯ ಅಧಿಕಾರಿಗಳು/ಸಹಾಯಕ ಕಂದಾಯ ಅಧಿಕಾರಿಗಳು/ನಿರೀಕ್ಷಕರು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
5. ಕಲ್ಯಾಣ ಶಾಖೆ ಅಧಿಕಾರಿಗಳು, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
6. ಎಸ್.ಡಬ್ಲ್ಯೂ.ಎಂ, ಅಧಿಕಾರಿಗಳು/ಗುತ್ತಿಗೆದಾರರು, ಜಯನಗರ ಶಾಪಿಂಗ್ ಕಾಂಪ್ಲೆಕ್ಸ್ 9ನೇ ಮಹಡಿ, ಬೆಂಗಳೂರು–11.
7. ವಿದ್ಯುತ್ ವಿಭಾಗದ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
8. ಆರೋಗ್ಯ ಅಧಿಕಾರಿಗಳು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
9. ಸಹಾಯಕ ನಿದೇಶಕರು ಪಶುಪಾಲನೆ ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
10. ಬಿ.ಡಬ್ಲ್ಯೂ.ಎಸ್.ಎಸ್.ಬಿ, ಅಧಿಕಾರಿಗಳು/ಗುತ್ತಿಗೆದಾರರು ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
11. ಟ್ರಾಫಿಕ್/ಸಿವಿಲ್ ಪೋಲಿಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
12. ರೆಸಿಡೆನ್ಸ್ ವೆಲ್‌ಫೆರ್ ಆಸೋಸಿಯೇಷನ್ಸ್, ಹೆಚ್.ಎ.ಎಲ್ ಏರ್‌ಪೋರ್ಟ್ ವಾರ್ಡ್.
13. ವಾರ್ಡ್‌ಗೆ ಸಂಬಂಧಿಸಿದ ಎನ್.ಜಿ.ಓ ಗಳು ಹೆಚ್.ಎ. ಎಲ್ ಏರ್‌ಪೋರ್ಟ್ ವಾರ್ಡ್.
14. ವಾರ್ಡ್‌ಗೆ ಸಂಬಂಧಿಸಿದ, ಎಸ್.ಸಿ/ಎಸ.ಟಿ ಸಂಘಟನೆಗಳು.
15. ವಾರ್ಡ್‌ನ ಆಸಕ್ತಿಯುಳ್ಳ ವಾಲೆಂಟಿಯರ್ಸ್.